Q.P. Code – 50130

# ಪ್ರಥಮ ಬಿ.ಎ. ಪದವಿ ಪರೀಕ್ಷೆ

## ಸೆಪ್ಟೆಂಬರ್/ಅಕ್ಟೋಬರ್ 2013

## (ದೂರ ಶಿಕ್ಷಣ)

## (ಹೊಸಬರಿಗೆ/ಹಳಬರಿಗೆ)

## ಬಸವ ತತ್ವ

## (DAA 530) ಪತ್ರಿಕೆ 1 – ಬಸವ ತತ್ವಪ್ರದೀಪಿಕೆ

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 70/80*

***ಸೂಚನೆಗಳು :*** *1) **30** ಅಂಕಗಳ ಆಂತರಿಕ ಪದ್ಧತಿಯಲ್ಲಿ ಬರೆದ ವಿದ್ಯಾರ್ಥಿಗಳು **70** ಅಂಕಗಳ ಪ್ರಶ್ನೆಗಳಿಗೆ ಉತ್ತರಿಸುವುದು.*

*2) **20** ಅಂಕಗಳ ಆಂತರಿಕ ಪದ್ಧತಿಯಲ್ಲಿ ಬರೆದ ವಿದ್ಯಾರ್ಥಿಗಳು **80** ಅಂಕಗಳ ಪ್ರಶ್ನೆಗಳಿಗೆ ಉತ್ತರಿಸುವುದು.*

*3) ವಿಶೇಷ ಸೂಚನೆ : ಹೊಸಬರು **ಡಿ**-ವಿಭಾಗದ ಪ್ರಶ್ನೆಯನ್ನು **ಕಡ್ಡಾಯವಾಗಿ** ಉತ್ತರಿಸಬೇಕು.*

ವಿಭಾಗ – ಎ

1. ಯಾವುದಾದರೂ **ಎರಡು** ವಚನಗಳನ್ನು ವಿಶ್ಲೇಷಿಸಿ : **2 × 5 = 10**

(ಅ) ನೀರ ಕಂಡಲ್ಲಿ ಮುಳುಗುವರಯ್ಯ
ಮರವ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವ, ಒಣಗುವ ಮರವ
ಮೆಚ್ಚಿದವರು ನಿಮ್ಮನೆತ್ತಬಲ್ಲರು
ಕೂಡಲ ಸಂಗಮದೇವ.

(ಆ) ನಂಬಿದ ಹೆಂಡತಿಗೆ ಗಂಡನೊಬ್ಬ ಕಾಣಿರೊ,
ನಂಬಬಲ್ಲ ಭಕ್ತರಿಗೆ ದೇವನೊಬ್ಬ ಕಾಣಿರೊ,
ಬೇಡ ಬೇಡ ಅನ್ಯದೈವ ಸಂಗ, ಅನ್ಯ ದೈವವೆಂಬುದು ಹಾದರ ಕಾಣಿರೋ
ಕೂಡಲ ಸಂಗಮದೇವ ಕಂಡರೆ ಮೂಗ ಕೊಯ್ವ ಕಾಣಿರೋ॥



ಪು.ತಿ.ನೋ.

(ಇ) ಪೊಲೆ ಮುಡಿ ಇದ್ದುದೆ ಹೆಣ್ಣೆಂದು ಪ್ರಮಾಣಿಸಲಿಲ್ಲ,
ಕಾಸೆ ಮಿಸೆ ಕಠಾರವಿದ್ದುದೆ ಗಂಡೆಂದು ಪ್ರಮಾಣಿಸಲಿಲ್ಲ,
ಅದು ಜಗದ ಹಾವೆ, ಬಲ್ಲವರ ನೀತಿಯಲ್ಲ,
ಏತರ ಹಣ್ಣಾದರೂ ಮಧುರವೆ ಕಾರಣ,
ಅಂದವಿಲ್ಲದ ಕುಸುಮಕ್ಕೆ ವಾಸನೆಯೆ ಕಾರಣ
ಇದರಂದವ ನೀನೆ ಬಲ್ಲೆ ಶಂಭು ಜಕ್ಕೇಶ್ವರಾ,

ವಿಭಾಗ – ಬಿ

2. ಯಾವುದಾದರೂ **ಎರಡಕ್ಕೆ** ಟಿಪ್ಪಣಿ ಬರೆಯಿರಿ : **2 × 10 = 20**

(ಅ) ಬಸವಣ್ಣನವರ ಕರ್ಮ ಸಿದ್ಧಾಂತವನ್ನು ವಿವರಿಸಿ.

(ಆ) ದಾಸ್ಯ ಪದ್ಧತಿ ಎಂದರೇನು? ವಿವಿಧ ಮುಖಗಳನ್ನು ವಿವರಿಸಿ.

(ಇ) ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ಶರಣರು ಸೂಚಿಸಿದ ತಾತ್ವಿಕ ವಿಚಾರಗಳನ್ನು ವಿವರಿಸಿ.

ವಿಭಾಗ – ಸಿ

ನಿಜಾಚರಣೆ

3. ಯಾವುದಾದರೂ **ಎರಡು** ಸಂದರ್ಭಗಳ ಸರಳ ಆಚರಣೆಯನ್ನು ವಿವರಿಸಿ : **2 × 5 = 10**

(ಅ) ಜವಳ ಇಳಿಸುವ ಕಾರ್ಯಕ್ರಮ

(ಆ) ಸೀಮಂತ ಕಾರ್ಯ

(ಇ) ಶಂಕು ಸ್ಥಾಪನೆ ಅಥವಾ ಅಡಿಗಲ್ಲು ಸಮಾರಂಭ

ವಿಭಾಗ – ಡಿ

ವಿಶ್ವ ಧರ್ಮಗಳು ಮತ್ತು ಧರ್ಮಗಳ ಸಮನ್ವಯ

4. ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ : **3 × 10 = 30**

(ಅ) ವೇದಗಳು ಎಂದರೇನು? ವೇದಗಳಲ್ಲಿ ಎಷ್ಟು ವಿಧ ಮತ್ತು ಅವುಗಳ ಸಂದೇಶಗಳನ್ನು ವಿವರಿಸಿ.

(ಆ) ಬೌದ್ಧ ಧರ್ಮದ ಅಷ್ಟಾಂಗ ಮಾರ್ಗವನ್ನು ವಿವರಿಸಿ.

(ಇ) ಕ್ರೈಸ್ತ ಧರ್ಮದ ಆದರ್ಶಗಳು ಮತ್ತು ಯೇಸುವಿನ ಆದೇಶಗಳನ್ನು ವಿವರಿಸಿ.

(ಈ) ಇಸ್ಲಾಂ ಧರ್ಮದ ಸಾರಾಂಶ ಮತ್ತು ಸಾಮಾಜಿಕ ನಿಬಂಧನೆಗಳು ಯಾವುವು? ವಿವರಿಸಿ.

ವಿಭಾಗ – ಇ

5. ವಿಶೇಷ ಸೂಚನೆ : ಹೊಸಬರು ಈ ಪ್ರಶ್ನೆಯನ್ನು **ಕಡ್ಡಾಯವಾಗಿ** ಉತ್ತರಿಸಬೇಕು : **1 × 10 = 10**

(ಅ) ವೀರಶೈವ ಧರ್ಮದ ಶಿವ ತತ್ವ ವಿಚಾರವನ್ನು ವಿವರಿಸಿ.

---